4. ಸೂರ್ಯ ಅಸ್ತಮಾನವಾದನಂತರ ಮತ್ತು ಸೂರ್ಯೋದಯಾತ್ಪೂರ್ವ ಯಾವ ಸ್ಥಳದಲ್ಲೂ ಜೆಕ್ಕೆಯನ್ನು ರೂಢಿಸಕೂಡದು ಮತ್ತು ರಫ್ತು ಮಾಡಕೂಡದು.

5. ಕಂಟ್ರಾಕ್ಟುದಾರ ಅಥವಾ ಅವರ ಆಳುಗಳ ಅಜಾಗರೂಕತೆಯಿಂದ ಫಾರೆಸ್ಟ್ಟಿನಲ್ಲಿ ಬೆಂಕಿ ಸಂಭವಿಸಿದರೆ ಇದರಿಂದ ವುಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನನ್ನೆ ಗುರಿಪಡಿಸಲ್ಪಡುತ್ತೆ.

6. ಕಂಟ್ರಾಕ್ಟುದಾರನು ಜೆಕ್ಕೆ ರೂಢಿಸುವದರಲ್ಲಿ ತಾಯಿಬೇರಿಗೆ ಜಾಖಮ ಆಗದಂತೆ ಪಕ್ಕದ ಬೇರುಗಳನ್ನೆ ಜಮಾಯಿಸಿ ಕೊಳ್ಳಬೇಕು.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 27ನೇ ಏಪ್ರೆಲ್ 1903.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ; ಈ ಕೆಳಗೆ ನಮೂದಿಸಿರುವ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಡಿಪೋದಲ್ಲಿ ಚೌಬೀನವನ್ನು ಈ ಕೆಳಗೆ ನಮೂದಿಸಿದ ತಾರೀಖಿನಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಂದ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುವುದು. ಹರಾಜು ಮಧ್ಯಾನ್ಹ 2 ಘಂಟೆಗೆ ಸುರು ಮಾಡಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ಸಾಗುವಾನಿ ನಾಟ.		ಮತ್ತಿ ನಾಟ.		ನಂದಿನಾಟ.		ಬೀಟೆನಾಟ.		ಕಾಡುಜಾತಿ ನಾಟು.		ಧರ.
			ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	
1	ಹೊಳಲಕೆರೆ ರೈಲ್ವೆ ಸ್ಟೇಷನ್.	28– 5–1903	30	879	7	171	3	77	3	73	5	131	ಸ್ಟೇಷನ್ ಪಕ್ಕದಲ್ಲಿ

ಹರಾಜು ಷರತ್ತು:—1895ನೇ ಇಸವಿ ಏಪ್ರೆಲ್ 25ನೇ ಮುಕ್ಕಂ ನಂಬರ್ 15ನೇ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸಿರುವ 1895ನೇ ಇಸವಿ ಮಾರ್ಚಿ 15ನೇ ಮುಕ್ಕಂ ನಂಬರು 15229—R. F. 155—92ನೇ ನೋಟಿಫಿಕೇಷನ್ ನೋಡಬೇಕು.

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 22ನೇ ಏಪ್ರೆಲ್ 1903.

ಕೋಲಾರ ತಾಲ್ಲೂಕಿಗೆ ಕೇರಿದ ಬಾಜೂದಲ್ಲಿ ನಮೂದಿಸಿರುವ ಗ್ರಾಮಗಳನ್ನು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರ

ಕೋಲಾರ ತಾಲ್ಲೂಕು.
ಸುಗಟೂರು ಹೋಬಳಿ.
ಜೋಡಿ ಉಪ್ಪುಕುಂಟೆ—17ನೇ ಜೂನ್ 1903.
ಜೋಡಿ ಹನುಮಂತಪುರ—19ನೇ ಜೂನ್ 1903.

ರವಾಗಿ ಕೋಲಾರ ತಾಲ್ಲೂಕು ಅಮಲ್ದಾರ್ ಕಛೇರಿಯಲ್ಲಿ ಜಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಿಸುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲ್ ಬಗ್ಗೆ 30—4—1903ನೇ ಮುಕ್ಕಂ 17ನೇ ನಂಬರ್ ಮೈಸೂರು ಗೆಜೆಟಿನ IIನೇ ಭಾಗದ 184—185ನೇ ನಂಬರ್ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ಇನ್ಸ್ಟ್ರಾರ್.

ತಾರೀಖು 17ನೇ ಏಪ್ರೆಲ್ 1903.

ತುಮಕೂರು ಡಿಸ್ಟ್ರಿಕ್ಟು 2ನೇ ಜನರಲ್ ಅಸಿಸ್ಟೆಂಟ್ ಕಮಿಷನರ್ ಮತ್ತು 1ನೇ ಕ್ಲಾಸು ಮ್ಯಾಜಿಸ್ಟ್ರೇಟ್ ಕೋರ್ಟು.

1901—1902ನೇ ಇಸವಿ ಕ್ರಿಮಿನಲ್ ಮಿಸಲೇನಿಯಸ್ ಮೊ|| ನಂ. 78.

ಫಿರ್ಯಾದಿ. ಸರ್ಕಾರ

ಅಪರಾಧಿ. ಬೂಸಿಗಾ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—ಮೇಲ್ಕಂಡ ಮೊಕದ್ದಮಾ 1ನೇ ಅಪರಾಧಿ ತುರ್ವೇಕೆರೆ ಗ್ರಾಮದ ಬೂಸಿಗಾ ಎಂಬುವನ ಮನೆಯಲ್ಲಿ ಇದಕ್ಕೆ ಲಗತ್ತು ಇರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಮಾಲುಗಳು 1902ನೇ ಇಸವಿ ಮೇ 3ನೇ ಮುಕ್ಕಂನಲ್ಲಿ ದೊರತದ್ದೆಂದು ತುರ್ವೇಕೆರೆ ಸಬ್ ತಾಲ್ಲೂಕು ಪೊಲೀಸಿನವರಿಂದ ಹಾಜರಾಗಲ್ಪಟ್ಟಿತು.